18/1

# 2005

## POLITICAL SCIENCE AND INTERNATIONAL RELATIONS

### Paper 1

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* **three** *questions in Part D.*

---

*ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.*

## PART A

4×5=20

*Write short notes in about 50 words each. Each question carries 5 marks.*

1. (a) Bentham's Principle of Utility

   (b) Positivism in Political Science

   (c) Social Class

   (d) Concept of Authority

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಕಿರು ಟಿಪ್ಪಣಿ ಬರೆಯಿರಿ. ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಬೆಂಥಮ್‌ನ ಪ್ರಯೋಜಕತಾ ತತ್ವ

(ಬಿ) ರಾಜಕೀಯ ವಿಜ್ಞಾನದಲ್ಲಿ ಪ್ರತ್ಯಕ್ಷವಾದ (Positivism)

(ಸಿ) ಸಾಮಾಜಿಕ ವರ್ಗ

(ಡಿ) ಅಧಿಕಾರದ ಪರಿಕಲ್ಪನೆ

[Turn over

## PART B

*10×10=100*

*Answer each question in about 100 words. Each question carries 10 marks.*

1. Highlight the conception of *Danḍa* in *Manusmriti* ?

2. What is meant by 'Materialistic dialectics' ?

3. How is 'hegemony' different from 'domination' ?

4. What is the distincitive contribution of Mao to the understanding of contradictions ?

5. Outline Dadabhai Naoroji's understanding of Drain Thoery.

6. In what way is the 73rd Amendment to the Constitution a departure from the previous provisions on Panchayati Raj ?

7. Is there a relationship between 'Proportional voting' and the Party System ? Elaborate.

8. How is the pluralistic understanding of Sovereignty different from the Monistic understanding of Sovereignty ?

9. Highlight the provision of the Protection of Civil Rights (PCR) Act in India.

10. Bring out the relationship between ethnic identity and the emerging party system in sub-Saharan Africa.

## ಭಾಗ B

*10×10=100*

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

1. ಮನುಸ್ಮೃತಿಯ ದಂಡ ಪರಿಕಲ್ಪನೆ ಕುರಿತಂತೆ ಅದರ ಮುಖ್ಯಾಂಶಗಳನ್ನು ಬರೆಯಿರಿ.

2. ದ್ವಂದ್ವಾತ್ಮಕ ಭೌತಿಕವಾದ (Materialistic Dialectics) ಎಂದರೇನು ?

3. ಅಧಿನಾಯಕತ್ವ (Hegemony) ವು ಪ್ರಬಲತೆಯಿಂದ (Domination) ಹೇಗೆ ಭಿನ್ನವಾಗಿದೆ ತಿಳಿಸಿ ?

4. ವೈರುಧ್ಯತೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಮಾವೋನ ವಿಶಿಷ್ಟ ಕೊಡುಗೆ ಏನು ?

5. ದಾದಾಭಾಯ್ ನವರೋಜಿಯವರು ಹರಿದು ಹೋಗುವ ಸಂಪನ್ಮೂಲ (ಡ್ರೈನ್) ಸಿದ್ಧಾಂತವನ್ನು ಹೇಗೆ ಅರ್ಥೈಸಿದ್ದಾರೆ ಎಂಬುದನ್ನು ತಿಳಿಸಿ.

6. ಸಂವಿಧಾನದ 73ನೇ ತಿದ್ದುಪಡಿಯು ಯಾವ ರೀತಿಯಲ್ಲಿ ಪಂಚಾಯತಿ ರಾಜ್ ಬಗ್ಗೆ ಈ ಹಿಂದಿದ್ದ ಅವಕಾಶಗಳಿಂದ ಹೇಗೆ ದೂರ ಸರಿದಿದೆ ? ತಿಳಿಸಿ.

7. 'ಪ್ರಮಾಣಾನುಸಾರ ಮತದಾನ' ಮತ್ತು 'ಪಕ್ಷ ವ್ಯವಸ್ಥೆ' ಇವೆರಡರ ನಡುವೆ ಏನಾದರೂ ಸಂಬಂಧವಿದೆಯೆ ? ವಿವರಿಸಿ.

8. ಸಾರ್ವಭೌಮತ್ವ ಕುರಿತಂತೆ, ಅನೇಕತ್ವವಾದೀ ವಿಚಾರಧಾರೆಯು ಏಕತ್ವವಾದೀ ವಿಚಾರಧಾರೆಗಿಂತ ಹೇಗೆ ಭಿನ್ನವಾಗಿದೆ ? ತಿಳಿಸಿ.

9. ಭಾರತದ ಪೌರಹಕ್ಕುಗಳ ರಕ್ಷಣಾ ಕಾಯಿದೆ (PCR) ಯಲ್ಲಿರುವ ಅವಕಾಶಗಳು ಯಾವುವು ಎಂಬುದನ್ನು ವಿವರಿಸಿ.

10. ಆಫ್ರಿಕಾದ ಉಪ-ಸಹಾರಾ ಪ್ರದೇಶದಲ್ಲಿ ಉಗಮಿಸುತ್ತಿರುವ ಪಕ್ಷ ವ್ಯವಸ್ಥೆಗೂ ಮತ್ತು ಜನಾಂಗೀಯ ಅನನ್ಯತೆಗೂ ಯಾವ ರೀತಿಯ ಸಂಬಂಧವಿದೆ ಎಂಬುದನ್ನು ನಿರೂಪಿಸಿ.

## PART C

6×15=90

*Answer each question in about 150 words. Each question carries 15 marks.*

1. Highlight J.S. Mill's arguments in favour of liberty in *On Liberty*.

2. Outline the central features of Lenin's theory of Imperialism.

3. Discuss the significance of rational choice in political analysis.

4. Would you consider 'Participatory Democracy' as an advanced version of Democracy ? Give reasons for your answer.

5. Highlight the constitutional provisions with regard to Scheduled Tribes in India.

6. Review the role of the Prime Minister in the Indian political system.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

1. 'ಆನ್ ಲಿಬರ್ಟಿ' ಕೃತಿಯಲ್ಲಿ, ಸ್ವಾತಂತ್ರ್ಯದ ಪರವಾಗಿ ಜೆ.ಎಸ್. ಮಿಲ್ ಪ್ರತಿಪಾದಿಸುವ ಮುಖ್ಯ ವಿಚಾರಗಳೇನು ಎಂಬುದನ್ನು ನಿರೂಪಿಸಿ.

2. ಸಾಮ್ರಾಜ್ಯವಾದದ ಬಗ್ಗೆ ಲೆನಿನ್ ಸಿದ್ಧಾಂತದ ಮುಖ್ಯಾಂಶಗಳೇನು ? ತಿಳಿಸಿ.

3. ರಾಜಕೀಯ ವಿಶ್ಲೇಷಣೆಯಲ್ಲಿ, ತರ್ಕಸಮ್ಮತ ಆಯ್ಕೆಯ ಮಹತ್ವ ಕುರಿತು ಚರ್ಚಿಸಿ.

4. 'ಸಹಭಾಗಿತ್ವ ಪ್ರಜಾಪ್ರಭುತ್ವ' ವನ್ನು ಪ್ರಜಾಪ್ರಭುತ್ವದ ಮುಂದುವರೆದ ಆವೃತ್ತಿ ಎಂದು ಭಾವಿಸುತ್ತೀರಾ ? ಹಾಗೆ ಭಾವಿಸುವುದಕ್ಕೆ ಕಾರಣಗಳೇನು ? ತಿಳಿಸಿ.

5. ಭಾರತದ ಪರಿಶಿಷ್ಟ ಬುಡಕಟ್ಟುಗಳಿಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿರುವ ಅವಕಾಶಗಳೇನು ಎಂಬುದನ್ನು ಸ್ಪಷ್ಟಪಡಿಸಿ.

6. ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಪ್ರಧಾನ ಮಂತ್ರಿಗಳ ಪಾತ್ರವನ್ನು ಕುರಿತು ವಿವರಿಸಿ.

3×30=90

## PART D

*Answer any **three** of the following questions, each in about 300 words. Each question carries 30 marks.*

1. Evaluate Plato's conception of 'Justice' by taking into account Aristotle's criticisms of the same.

2. Discuss the appropriateness of the Base — Superstructure distinction in Marxist analysis.

3. Review Gandhi's understanding of *Swaraj* and comment on its relevance.

4. Trace the road-map that Ambedkar laid down for a social revolution in India. Why is he positively disposed towards the State ?

5. Over the years, proportionately more of the poor and the marginalized social groups in India have been casting their votes in the General Elections, as compared to the rich and the powerful. Give reasons for this significant turn in the Indian electoral process.

3×30=90

## ಭಾಗ D

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

1. ಪ್ಲೇಟೋನ ನ್ಯಾಯ ಪರಿಕಲ್ಪನೆ ಕುರಿತಂತೆ ಅರಿಸ್ಟಾಟಲ್‌ನ ಟೀಕೆಗಳನ್ನು ಗಮನದಲ್ಲಿಟ್ಟುಕೊಂಡು ಪ್ಲೇಟೋ ಪರಿಕಲ್ಪನೆಯ ನಿಷ್ಕರ್ಷೆ ಮಾಡಿ.

2. ಮಾರ್ಕ್ಸ್‌ವಾದೀ ವಿಶ್ಲೇಷಣೆಯಲ್ಲಿ, ತಳ ಮತ್ತು ಮೇಲು ರಚನೆಯ ವ್ಯತ್ಯಾಸ ಕಲ್ಪಿಸಿರುವುದು ಎಷ್ಟು ಸೂಕ್ತವಾಗಿದೆ ಎಂಬ ಬಗ್ಗೆ ಚರ್ಚಿಸಿ.

3. ಗಾಂಧಿಯವರ ದೃಷ್ಟಿಯಲ್ಲಿ 'ಸ್ವರಾಜ್ಯ' ಎಂದರೇನು ಎಂಬ ಬಗ್ಗೆ ಪರಿಶೀಲಿಸಿ ಮತ್ತು ಅದರ ಪ್ರಸ್ತುತತೆ ಕುರಿತಂತೆ ನಿಮ್ಮ ಅಬಿಪ್ರಾಯಗಳನ್ನು ಬರೆಯಿರಿ.

4. ಭಾರತದಲ್ಲಿ ಸಾಮಾಜಿಕ ಕ್ರಾಂತಿ ಕುರಿತಂತೆ ಅಂಬೇಡ್ಕರ್ ಅವರು ರೂಪಿಸಿದ ಮಾರ್ಗವಿಧಾನವನ್ನು ಕುರಿತು ಬರೆಯಿರಿ. ಇದರಲ್ಲಿ ಪ್ರಭುತ್ವದ ಪಾತ್ರದ ಬಗ್ಗೆ ಅವರು ಸಕಾರಾತ್ಮಕ ನಿಲುವನ್ನು ಹೊಂದಲು ಕಾರಣವೇನು ?

5. ಈಚೆಗಿನ ವರ್ಷಗಳಲ್ಲಿ ಭಾರತದ ಸಾರ್ವತ್ರಿಕ ಚುನಾವಣೆಗಳಲ್ಲಿ ಶ್ರೀಮಂತರು ಮತ್ತು ಪ್ರಬಲರಾದವರಿಗಿಂತ ಬಡವರು ಮತ್ತು ಅಂಚಿಗೆ ಸರಿಸಲ್ಪಟ್ಟ ಸಾಮಾಜಿಕ ಗುಂಪುಗಳವರೇ ಹೆಚ್ಚಾಗಿ ಮತದಾನದಲ್ಲಿ ಭಾಗವಹಿಸುತ್ತಿದ್ದಾರೆ. ಭಾರತದ ಚುನಾವಣಾ ಪ್ರಕ್ರಿಯೆಯಲ್ಲಿ ಇಂಥ ಒಂದು ಪ್ರಮುಖ ತಿರುವಿಗೆ ಕಾರಣಗಳೇನು ?

# 2005

## POLITICAL SCIENCE AND INTERNATIONAL RELATIONS

### Paper 2

*Time : 3 Hours ]* *[ Maximum Marks : 300*

---

### INSTRUCTIONS

*Each question is printed both in English and in Kannada.*

*Answers must be written in the medium specified (English or Kannada) in the Admission Ticket issued to you, which must be stated clearly on the cover of the answer book in the space provided for this purpose. No credit will be given for the answers written in a medium other than that specified in the Admission Ticket. In case of any doubt in the Kannada text, please refer to English text.*

*This paper has four parts :*

| | |
|---|---|
| **A** | 20 marks |
| **B** | 100 marks |
| **C** | 90 marks |
| **D** | 90 marks |

*Marks allotted to each question are indicated in each part.*

*All questions in Part A, Part B and Part C are* **compulsory**.
*Answer any* ***three*** *questions in Part D.*

---

ವಿಶೇಷ ಸೂಚನೆ : ಈ ಮೇಲ್ಕಂಡ ಸೂಚನೆಗಳ ಕನ್ನಡ ರೂಪಾಂತರವನ್ನು ಈ ಪ್ರಶ್ನೆ ಪತ್ರಿಕೆಯ ಕೊನೆಯ ಪುಟದಲ್ಲಿ ಮುದ್ರಿಸಲಾಗಿದೆ.

## PART A

*Write short notes in about 50 words each. Each question carries 5 marks.*

1. (a) *Pax Britannica*

   (b) UNDP

   (c) Universal Declaration on Human Rights.

   (d) SALT II

## ಭಾಗ A

*4×5=20*

*ಪ್ರತಿಯೊಂದು ಪ್ರಶ್ನೆಗೂ ಸುಮಾರು 50 ಪದಗಳಿಗೆ ಮೀರದಂತೆ ಕಿರು ಟಿಪ್ಪಣಿ ಬರೆಯಿರಿ.*
*ಪ್ರತಿ ಪ್ರಶ್ನೆಗೆ 5 ಅಂಕಗಳು.*

**1.** (ಎ) ಪ್ಯಾಕ್ಸ್ ಬ್ರಿಟಾನಿಕಾ

(ಬಿ) ಯು.ಎನ್.ಡಿ.ಪಿ.

(ಸಿ) ಮಾನವ ಹಕ್ಕುಗಳನ್ನು ಕುರಿತ ಜಾಗತಿಕ ಘೋಷಣೆ

(ಡಿ) ಎಸ್.ಎ.ಎಲ್.ಟಿ. II (SALT II)

[Turn over

## PART B

*10×10=100*

*Answer each question in about 100 words. Each question carries 10 marks.*

1. Highlight the central tenets of the doctrine of Balance of Power.

2. Comment on the importance of Geography as an element of national power today.

3. Bring out the distinction between 'treaties' and 'conventions' in International Law.

4. Highlight the major trends in the consolidation of the European Union.

5. Distinguish between 'tactical' and 'strategic' nuclear armament and outline their implications.

6. Give an account of the provisions of the Partial Test Ban Treaty and underscore its limitations.

7. Highlight the characteristic features of the political terrorism epitomized by organizations such as Al-Queda.

8. Give reasons for the tension between the United States of America and China over Taiwan.

9. What is the role and place of Russia in the Commonwealth of Independent States (CIS).

10. Identify the main direction of India's 'Look East' policy.

## ಭಾಗ B

10×10=100

*ಪ್ರತಿಯೊಂದು ಉತ್ತರವೂ 100 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 10 ಅಂಕಗಳು.*

**1.** ಅಧಿಕಾರದ ಸಮತೋಲನ ಸಿದ್ಧಾಂತದ ಕೇಂದ್ರ ತತ್ವಗಳೇನು ? ನಿರೂಪಿಸಿ.

**2.** ಇಂದಿನ ರಾಷ್ಟ್ರೀಯ ಅಧಿಕಾರದಲ್ಲಿ ಭೌಗೋಳಿಕ ಅಂಶ ಬಹು ಮಹತ್ವದ್ದಾಗಿದೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ಬರೆಯಿರಿ.

**3.** ಅಂತರರಾಷ್ಟ್ರೀಯ ಕಾನೂನಿನಲ್ಲಿ, 'ಒಪ್ಪಂದ'ಗಳು (Treaties) ಮತ್ತು 'ಒಡಂಬಡಿಕೆ'ಗಳ (Conventions) ನಡುವಿನ ವ್ಯತ್ಯಾಸವೇನು ತಿಳಿಸಿ.

**4.** ಐರೋಪ್ಯ ಒಕ್ಕೂಟವನ್ನು ಕ್ರೋಢೀಕರಿಸುವುದರಲ್ಲಿನ ಪ್ರಮುಖ ಪ್ರವೃತ್ತಿಗಳು ಯಾವುವು ? ಸ್ಪಷ್ಟಪಡಿಸಿ.

**5.** ಯುದ್ಧತಂತ್ರದ (Tactical) ಮತ್ತು ಆಯಕಟ್ಟಿನ (Strategic) ಶಸ್ತ್ರೀಕರಣಗಳ ನಡುವಿನ ವ್ಯತ್ಯಾಸವೇನು ? ತಿಳಿಸಿ. ಹಾಗೂ, ಅವುಗಳ ಪರಿಣಾಮಗಳನ್ನು ಕುರಿತು ಬರೆಯಿರಿ.

**6.** ಭಾಗಶಃ ಪರೀಕ್ಷಾ ನಿಷೇಧ ಕರಾರಿನಲ್ಲಿರುವ ಅವಕಾಶಗಳನ್ನು ಕುರಿತು ಬರೆಯಿರಿ ಮತ್ತು ಅದರ ಮಿತಿಗಳೇನು ಎಂಬುದನ್ನು ಪರಿಶೀಲಿಸಿ.

**7.** ಅಲ್-ಕ್ವಿದಾ ದಂತಹ ಸಂಘಟನೆಗಳು ಬಿಂಬಿಸುತ್ತಿರುವ ರಾಜಕೀಯ ಭಯೋತ್ಪಾದನೆಯ ವಿಶಿಷ್ಟ ಸ್ವರೂಪವನ್ನು ಕುರಿತು ಬರೆಯಿರಿ.

**8.** ತೈವಾನ್ ಸಂಬಂಧವಾಗಿ, ಅಮರಿಕಾ ಸಂಯುಕ್ತ ಸಂಸ್ಥಾನಗಳು ಹಾಗೂ ಚೀನಾದ ನಡುವೆ ಬಿಕ್ಕಟ್ಟಿಗೆ ಕಾರಣಗಳೇನು ? ತಿಳಿಸಿ.

**9.** ಸ್ವತಂತ್ರ ರಾಜ್ಯಗಳ ಕಾಮನ್‌ವೆಲ್ತ್ (CIS) ವಿಷಯದಲ್ಲಿ ರಷಿಯಾದ ಪಾತ್ರ ಹಾಗೂ ಸ್ಥಾನ ಕುರಿತಂತೆ ಬರೆಯಿರಿ.

**10.** ಭಾರತದ 'ಪೂರ್ವದತ್ತ ನೋಡು' ನೀತಿಯ ಮುಖ್ಯ ಉದ್ದೇಶವೇನು ? ತಿಳಿಸಿ.

[Turn over

## PART C

6×15=90

*Answer each question in about 150 words. Each question carries 15 marks.*

1. Is 'Cold War' a contradiction in terms ? Illustrate your answer taking into account the developments during the Cold War Era.

2. Comment on the relationship between the Non-aligned Movement and pursuit of disarmament, with suitable examples.

3. Explain the composition, powers and functions of the International Court of Justice.

4. Discuss the different modes of external interventions in the economy. How has economic globalization affected such interventions ?

5. Examine India's objections to the Nuclear Non-proliferation Treaty.

6. Highlight the characteristic features of the ethnic conflict in Sri-Lanka and bring out its impact on Indo-Sri Lanka relations.

## ಭಾಗ C

*6×15=90*

*ಪ್ರತಿಯೊಂದು ಉತ್ತರವೂ 150 ಪದಗಳಿಗೆ ಮೀರದಂತಿರಬೇಕು. ಪ್ರತಿ ಪ್ರಶ್ನೆಗೆ 15 ಅಂಕಗಳು.*

**1.** 'ಶೀತಲ ಸಮರ' ಎನ್ನುವುದು ಪದಗಳ ವೈರುದ್ಧ್ಯವೆ ? ಶೀತಲ ಸಮರ ಶಕೆಯಲ್ಲಿ ನಡೆದ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ನಿಮ್ಮ ಉತ್ತರವನ್ನು ಬರೆಯಿರಿ.

**2.** 'ಅಲಿಪ್ತ ನೀತಿ ಚಳುವಳಿ' ಮತ್ತು 'ನಿಶ್ಶಸ್ತ್ರೀಕರಣ' ಪ್ರಯತ್ನಗಳ ನಡುವಿನ ಸಂಬಂಧ ಕುರಿತು ಸೂಕ್ತ ಉದಾಹರಣೆಗಳೊಂದಿಗೆ ನಿಮ್ಮ ಅಭಿಪ್ರಾಯ ಬರೆಯಿರಿ.

**3.** ಅಂತರರಾಷ್ಟ್ರೀಯ ಕಾನೂನು ನ್ಯಾಯಾಲಯದ ರಚನೆ, ಅಧಿಕಾರಗಳು ಮತ್ತು ಕಾರ್ಯಗಳನ್ನು ವಿವರಿಸಿ.

**4.** ಅರ್ಥವ್ಯವಸ್ಥೆಯಲ್ಲಿ ಯಾವಯಾವ ವಿಧಾನಗಳಲ್ಲಿ ಬಾಹ್ಯ ಪ್ರಕ್ಷೇಪವಾಗುತ್ತಿದೆ ಮತ್ತು ಆರ್ಥಿಕ ಜಾಗತೀಕರಣವು ಇಂತಹ ಪ್ರಕ್ಷೇಪಗಳ ಮೇಲೆ ಯಾವ ರೀತಿಯ ಪರಿಣಾಮ ಉಂಟುಮಾಡಿದೆ ? ಚರ್ಚಿಸಿ.

**5.** ಅಣ್ವಸ್ತ್ರ ಪ್ರಸರಣ ನಿಷೇಧ ಕರಾರಿನ ಬಗ್ಗೆ ಭಾರತದ ಆಕ್ಷೇಪಣೆಗಳೇನು ಎಂಬುದನ್ನು ಪರಿಶೀಲಿಸಿ.

**6.** ಶ್ರೀಲಂಕಾದ ಜನಾಂಗೀಯ ಕಲಹದ ವಿಶಿಷ್ಟ ಲಕ್ಷಣಗಳನ್ನು ನಿರೂಪಿಸಿ. ಇದು ಭಾರತ ಹಾಗೂ ಶ್ರೀಲಂಕಾದ ಸಂಬಂಧಗಳ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ ? ವಿವರಿಸಿ.

## PART D

$3 \times 30 = 90$

*Answer any **three** of the following questions, each in about 300 words. Each question carries 30 marks.*

**1.** Discuss the tension between ideology and national interest as determinants of foreign policy. Illustrate your answer with suitable examples.

**2.** Examine the impact of decolonization on the international community. Support your answer through trend reports and other illustrations.

**3.** Explain the main features of the W.T.O. regime and highlight the discontents it has bred.

**4.** Taking into account the powers and functions of the Security Council, make out a case for an appropriate expansion of its membership.

**5.** Discuss the reasons for the Indo-Pak conflict and assess the prospects of establishing durable peace between them.

## ಭಾಗ D

*3×30=90*

*ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವೂ 300 ಪದಗಳನ್ನು ಮೀರದಂತಿರಬೇಕು. ಪ್ರತಿ ಪ್ರಶ್ನೆಗೂ 30 ಅಂಕಗಳು.*

1. ವಿದೇಶಾಂಗ ನೀತಿಯ ನಿರ್ಣಾಯಕ ಅಂಶಗಳಾಗಿ ವಿಚಾರಧಾರೆ ಮತ್ತು ರಾಷ್ಟ್ರೀಯ ಹಿತಾಸಕ್ತಿ, ಇವೆರಡರ ನಡುವಿನ ಬಿಕ್ಕಟ್ಟನ್ನು ಕುರಿತು ಚರ್ಚಿಸಿ. ಸೂಕ್ತ ಉದಾಹರಣೆಗಳೊಂದಿಗೆ ನಿಮ್ಮ ಉತ್ತರ ಬರೆಯಿರಿ.

2. ಅಂತರರಾಷ್ಟ್ರೀಯ ಸಮುದಾಯದ ಮೇಲೆ ನಿರ್ವಸಾಹತೀಕರಣವು ಬೀರಿದ ಪ್ರಭಾವದ ಬಗ್ಗೆ ಪರಿಶೀಲಿಸಿ. ಪ್ರವೃತ್ತಿಗಳು, ವರದಿಗಳು ಹಾಗೂ ಇನ್ನಿತರ ಉದಾಹರಣೆಗಳೊಂದಿಗೆ ನಿಮ್ಮ ಉತ್ತರ ಬರೆಯಿರಿ.

. W.T.O. ಮುಖ್ಯ ಸ್ವರೂಪವನ್ನು ವಿವರಿಸಿ. ಅದು ಹುಟ್ಟುಹಾಕಿದ ಅಸಮಾಧಾನಗಳನ್ನು ನಿರೂಪಿಸಿ.

. ಭದ್ರತಾ ಮಂಡಳಿಯ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಗಮನದಲ್ಲಿಟ್ಟುಕೊಂಡು, ಅದರ ಸದಸ್ಯತ್ವವನ್ನು ಸೂಕ್ತವಾಗಿ ವಿಸ್ತರಿಸಬೇಕು ಎಂಬ ವಾದಕ್ಕೆ ಪುಷ್ಟಿ ಕೊಡುವಂತೆ ನಿರೂಪಿಸಿ.

. ಭಾರತ-ಪಾಕ್ ಘರ್ಷಣೆಗೆ ಕಾರಣಗಳೇನು ಎಂಬ ಬಗ್ಗೆ ಚರ್ಚಿಸಿ ಮತ್ತು ಅವುಗಳ ನಡುವೆ ದೃಢವಾಗಿ ಶಾಂತಿ ನೆಲೆಯೂರುವಂತೆ ಮಾಡಲು ಇರುವ ಸಾಧ್ಯತೆಗಳ ನಿಷ್ಕರ್ಷೆ ಮಾಡಿ.